# ಕರ್ನಾಟಕ ಸರ್ಕಾರ

ಸಂಖ್ಯೆ: ಆಕುಕ 34 ಅಮುಕಾ 2021

ಕರ್ನಾಟಕ ಸರ್ಕಾರ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು, ದಿನಾಂಕ: 04.02.2021

## ಸುತ್ತೋಲೆ

ವಿಷಯ: ಪರಿಷ್ಕೃತ ಪ್ರಮಾಣಿತ ಕಾರ್ಯಾಚರಣಾ ವಿಧಾನ – ಸಿನೆಮಾ ಥಿಯೇಟರ್‌ಗಳು, ಮಲ್ಟಿಪ್ಲೆಕ್ಸ್‌ಗಳಲ್ಲಿ ಶೇಕಡಾ 100 ರಷ್ಟು ಪ್ರೇಕ್ಷಕರಿಗೆ ಅವಕಾಶ ಕಲ್ಪಿಸುವ ಕುರಿತು.

ಉಲ್ಲೇಖ: ಕೋವಿಡ್ 19 – ರಾಜ್ಯ ತಾಂತ್ರಿಕ ಸಲಹಾ ಸಮಿತಿಯ 71 ನೇ ಸಭಾ ನಡಾವಳಿಯಂತೆ, ದಿನಾಂಕ: 03.02.2021 .

*****

ಪ್ರಸ್ತಾಪಿತ ವಿಷಯ ಹಾಗೂ ಉಲ್ಲೇಖದ ಅನ್ವಯ, ಕೋವಿಡ್-19 ನಿಯಂತ್ರಣ ಕ್ರಮವಾಗಿ ಹಾಗೂ ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ, ರಾಜ್ಯದ ಸಿನೆಮಾ ಥಿಯೇಟರ್‌ಗಳು, ಮಲ್ಟಿಪ್ಲೆಕ್ಸ್‌ಗಳಲ್ಲಿ ಶೇಕಡಾ 50 ರಷ್ಟು ಪ್ರೇಕ್ಷರರಿಗೆ ಅವಕಾಶ ಕಲ್ಪಿಸುವ ಕುರಿತು ಆದೇಶಿಸಲಾಗಿತ್ತು.

ಆದಾಗ್ಯೂ, ಕರ್ನಾಟಕ ರಾಜ್ಯ ಫಿಲ್ಮ್ ಛೇಂಬರ್‌ನ ಅಧ್ಯಕ್ಷರು ಹಾಗೂ ಸದಸ್ಯರೊಂದಿಗೆ ಸುಧೀರ್ಘ ಚರ್ಚೆಯನ್ನು ನಡೆಸಲಾಗಿದ್ದು, ರಾಜ್ಯದ ಸಿನೆಮಾ ಥಿಯೇಟರ್‌ಗಳು, ಮಲ್ಟಿಪ್ಲೆಕ್ಸ್‌ಗಳಲ್ಲಿ ಕೋವಿಡ್ 19 ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಕೈಗೊಳ್ಳುವುದಾಗಿ ಸದರಿಯವರು ತಿಳಿಸಿರುವ ಹಿನ್ನೆಲೆಯಲ್ಲಿ, ಈ ಹಿಂದಿನ ಆದೇಶವನ್ನು ಮರುಪರಿಶೀಲಿಸಲಾಗಿದೆ. ಅದರಂತೆ, ಮಾಹಿತಿ ಹಾಗೂ ಪ್ರಸಾರಣಾ ಮಂತ್ರಾಲಯ, ಭಾರತ ಸರ್ಕಾರ, ಇವರ ಮಾರ್ಗಸೂಚಿಯ ಅನ್ವಯ, ರಾಜ್ಯದ ಸಿನೆಮಾ ಥಿಯೇಟರ್‌ಗಳು, ಮಲ್ಟಿಪ್ಲೆಕ್ಸ್‌ಗಳಲ್ಲಿ ಅನುಷ್ಠಾನಗೊಳಿಸುವಂತೆ ಪರಿಷ್ಕೃತ ಪ್ರಮಾಣಿತ ಕಾರ್ಯಾಚರಣಾ ವಿಧಾನವನ್ನು. ಉಲ್ಲೇಖದ ಅನ್ವಯ ಸಿದ್ಧಪಡಿಸಲಾಗಿದ್ದು, ಅನುಬಂಧದಲ್ಲಿ ಲಗತ್ತಿಸಿದೆ. ಸದರಿ ಮಾಹಿತಿಯು ಈ ಕೆಳಕಂಡ ಲಿಂಕ್‌ನಲ್ಲಿಯೂ ಸಹ ಲಭ್ಯವಿರುತ್ತದೆ.

https://mib.gov.in/sites/default/files/FINAL%20SOP%20for%20Exhibition%20of%20Films%20%281%29.pdf

ಮುಂದುವರೆದು, ತಾಂತ್ರಿಕ ಸಲಹಾ ಸಮಿತಿಯ ಶಿಫಾರಸ್ಸಿನಂತೆ, ಈ ಅಂಶಗಳ ಕಟ್ಟುನಿಟ್ಟಿನ ಅನುಷ್ಠಾನಕ್ಕೆ ವಿಶೇಷ ಗಮನ ವಹಿಸಲು ಸೂಚಿಸಿದೆ.

- ಸಿನೆಮಾ ವೀಕ್ಷಿಸುವ ಸಮಯವೂ ಸೇರಿದಂತೆ, ಎಲ್ಲಾ ಸಮಯದಲ್ಲೂ ಪ್ರೇಕ್ಷಕರು ಮಾಸ್ಕ್ ಧರಿಸಿರುವುದನ್ನು ಖಚಿತಪಡಿಸಿಕೊಳ್ಳುವ ನಿಟ್ಟಿನಲ್ಲಿ ಸೂಕ್ತ ಮೇಲ್ವಿಚಾರಣೆ ನಡೆಸುವುದು.

- ಗ್ರಾಹಕರರು ಸಿನೆಮಾ ಟಿಕೆಟ್ ಬುಕ್ಕಿಂಗ್ / ಖರೀದಿಸುವ ಸಮಯದಲ್ಲಿ, ಅವರ ಹೆಸರು ಹಾಗೂ ಮೊಬೈಲ್ ಸಂಖ್ಯೆಗಳನ್ನು ಸಂಗ್ರಹಿಸಬೇಕು. ಇದರಿಂದ ಸಂಪರ್ಕಿತರ ಮಾಹಿತಿ ಪಡೆಯುವುದು ಹಾಗೂ ಕೋವಿಡ್ 19 ಪರೀಕ್ಷೆ ನಡೆಸಲು ಸಹಾಯವಾಗುವುದು.
- ಹವಾ ನಿಯಂತ್ರಕಗಳು / ಯಾವುದೇ ಕೂಲಿಂಗ್ ವ್ಯವಸ್ಥೆಯ ಬಳಕೆಯಲ್ಲಿ CPWD ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಪಾಲಿಸುವುದು.
- ಅನಾವರಣದ ಸಮಯವನ್ನು ಕಡಿಮೆಗೊಳಿಸಲು (to reduce exposure time) ಹಾಗೂ ವಾತಾಯನವನ್ನು (ventilation) ಉತ್ತಮಗೊಳಿಸಲು, ಪ್ರತಿ ಪ್ರದರ್ಶನದಲ್ಲಿ ಎರಡು ಮಧ್ಯಂತರ ವಿರಾಮಗಳನ್ನು ನೀಡುವುದು.
- ಪ್ರಮುಖ/ಆಯಕಟ್ಟಿನ ಸ್ಥಳಗಳಲ್ಲಿ ಕೋವಿಡ್-19ನ ನಿಯಂತ್ರಣ ಹಾಗೂ ಮುನ್ನೆಚ್ಚರಿಕಾ ಕ್ರಮಗಳ ಕುರಿತು ಮಾಡಬೇಕಾದ್ದು / ಮಾಡಬಾರದಾದ ವಿವರಗಳನ್ನು (Dos and Don'ts) ಪ್ರದರ್ಶಿಸುವುದು.

ಮೇಲ್ಕಾಣಿಸಿದ ಶಿಫಾರಸ್ಸುಗಳನ್ನು ಮಾರ್ಚ್ 2021ರ ಮೊದಲ ವಾರದಲ್ಲಿ ಪರಿಶೀಲಿಸಲಾಗುವುದು.

**(ಪಿ. ರವಿ ಕುಮಾರ್ )**
**ಸರ್ಕಾರದ ಮುಖ್ಯ ಕಾರ್ಯದರ್ಶಿ**

**ಇವರಿಗೆ:**

1. ಆಯುಕ್ತರು, ಬಿಬಿಎಂಪಿ
2. ವಿಶೇಷ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
3. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು,
4. ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
5. ಎಲ್ಲಾ ಜಿಲ್ಲಾ ಆರೋಗ್ಯಾಧಿಕಾರಿಗಳು
6. ಮುಖ್ಯ ಆರೋಗ್ಯಾಧಿಕಾರಿಗಳು (ಸಾರ್ವಜನಿಕ ಆರೋಗ್ಯ), ಬಿಬಿಎಂಪಿ
7. ಎಲ್ಲಾ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು.

**ಪ್ರತಿಯನ್ನು ಮಾಹಿತಿಗಾಗಿ ಕಳುಹಿಸಿದೆ:**

1. ಅಪರ ಮುಖ್ಯ ಕಾರ್ಯದರ್ಶಿ, ಆಕುಕ ಸೇವೆಗಳು
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ)
3. ಆಯುಕ್ತರು, ಆಕುಕ ಸೇವೆಗಳು
4. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಆರೋಗ್ಯ ಸೌಧ.
5. ನಿರ್ದೇಶಕರು, ಆಕುಕ ಸೇವೆಗಳು
6. ಮಾನ್ಯ ಆಕುಕ ಮತ್ತು ವೈದ್ಯಕೀಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಯವರು
7. ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ